ವಾರದ ಪತ್ರ

## ಕಲ್ಯಾಣ್ ಕೊಡುಗೆ

ಝೀ ಕನ್ನಡದ ಸರಿಗಮಪ ಸೀಸನ್17ರಲ್ಲಿ ಕೆ. ಕಲ್ಯಾಣ್ ಆಗಮನ ಖುಷಿ ತಂದಿತು. 'ನಿರ್ವಾಣವಾದರೆ ಏನಾದರೂ ನಿರ್ಮಾಣ ಮಾಡಲು ಸಾಧ್ಯ. ವಾದಗಳನ್ನು ನಂಬಬೇಡಿ, ಆಶೀರ್ವಾದಗಳನ್ನು ನಂಬಿ...' ಹೀಗೆ ಅವರಾಡಿದ ಮಾತುಗಳು ನೋಡುಗರ ಮನಸನ್ನು ಸೆಳೆದವು. 'ತುಂತುರು ಅಲ್ಲಿ ನೀರ ಹಾಡು, ಕಂಪನ ಇಲ್ಲಿ ಪ್ರೀತಿ ಹಾಡು' ಅಮೃತವರ್ಷಿಣಿಯ ಎಲ್ಲಾ ಹಾಡುಗಳು ಇಂದಿಗೂ ಬಹಳಷ್ಟು ಮನೆ, ಮನಗಳಲ್ಲಿ ನೆಲೆಸಿವೆ. ಹಾಡಿನ ಟ್ಯೂನ್ ಕೇಳಿದರೆ ಮನಸ್ಸು ಮುದಗೊಳ್ಳುತ್ತದೆ. ಕೆ. ಕಲ್ಯಾಣ್ ಸಾಹಿತ್ಯ ಸಂಗೀತದಲ್ಲಿ ಪ್ರೀತಿ, ಆಹ್ಲಾದ, ಜ್ಞಾನ, ಹದವಾಗಿ ಬೆರೆತು ಹಾಡುಗಳಾಗಿರುತ್ತವೆ. ಅಂತಹ ಉನ್ನತ ಸಾಹಿತ್ಯದ ಸಂಗೀತಗಾರ. ಅಬ್ಬರದ ಸಂಗೀತವಷ್ಟೇ ಅಲ್ಲ, ಸುಮಧುರ, ಅರ್ಥಪೂರ್ಣ, ಸತ್ವಯುತ ಸಾಹಿತ್ಯ ಸಂಗೀತ ಸಿನಿಮಾಗಳಲ್ಲಿ ರಚನೆಯಾಗಬೇಕು. ಕಲ್ಯಾಣ್ ಸದಾ ನೆನಪಿಡುವ ಹಾಡುಗಳನ್ನು ನೀಡಿದ್ದಾರೆ.

—ಮಂಜುನಾಥ್ ಜಿ., ಹಗರಿಬೊಮ್ಮನಹಳ್ಳಿ

## ಸರಳತೆ ಮಾದರಿ ಆಗಲಿ

ಧಾರಾವಾಹಿಗಳಲ್ಲಿ ತೋರಿಸುವ ಮದುವೆಗಳಲ್ಲಿನ ಆಡಂಬರ ಅತಿ ಹೆಚ್ಚಾಗಿವೆ. ಬಹುತೇಕ ಧಾರಾವಾಹಿಗಳಲ್ಲಿ ಮದುವೆ ಸಮಾರಂಭ ಬಂದೇ ಬರುತ್ತದೆ. ಸರ್ಕಾರವೇ ಸರಳ ಮದುವೆ ಪ್ರೋತ್ಸಾಹಿಸುತ್ತಿರುವಾಗ, ವಾಹಿನಿಗಳು ಅದ್ದೂರಿ ಮದುವೆ ಮಾಡಿ ಜನರನ್ನು ಪ್ರಚೋದಿಸುತ್ತಿವೆ.

ಸಾಮಾನ್ಯವಾಗಿ ಧಾರಾವಾಹಿಯ ಬಹುತೇಕ ಕಥೆಗಳು ಒಂದು ಶ್ರೀಮಂತ ಕುಟುಂಬ, ಮತ್ತೊಂದು ಬಡ ಕುಟುಂಬ. ಈ ಮನೆತನಗಳ ನಡುವೆ ಶೀತಲ ಸಮರ. ಆ ಕುಟುಂಬದ ಕುಡಿಗಳ ಪ್ರೇಮಾಂಕುರ ಆಗುತ್ತದೆ. ಅಲ್ಲಿ ಮಧ್ಯಮ ವರ್ಗದ ಬದುಕಿನ ಕಥೆಯಾಗಲಿ, ಇಂದಿನ ಸಾಮಾಜಿಕ ಸನ್ನಿವೇಶ– ಸಮಸ್ಯೆಗಳು ಕಾಣಿಸುವುದೇ ಇಲ್ಲ. ಶ್ರೀಸಾಮಾನ್ಯನು ಕಾಣದೆ ಇರುವ ಇಂತಹ ಕಥೆಗಳಿಂದ ವೀಕ್ಷಕನಿಗೆ ಯಾವ ಪ್ರಯೋಜನವೂ ಇಲ್ಲ.

—ವೀಣಾ ಶಂಕರ್, ಬೆಂಗಳೂರು

## ಮೂಲಗಾಯಕರೂ ನೆನಪಾಗಲಿ

ಕಲರ್ಸ್ ಕನ್ನಡದ 'ಹಾಡು ಕರ್ನಾಟಕ'ದಲ್ಲಿ ಧಾರವಾಡದ ವಿಶ್ವನಾಥ 'ಒಲವಿನ ಪ್ರಿಯಲತೆ ಅವಳದೆ ಚಿಂತೆ' ಎನ್ನುವ ಹಳೆಯ ಚಿತ್ರಗೀತೆಯನ್ನು ಬಹಳ ಸುಂದರವಾಗಿ ಹಾಡಿ ವೀಕ್ಷಕರ ಹಾಗೂ ತೀರ್ಪುಗಾರರ ಗಮನವನ್ನು ಸೆಳೆದರು. ಈ ಸಂದರ್ಭದಲ್ಲಿ ತೀರ್ಪುಗಾರರಲ್ಲಿ ಒಬ್ಬರಾದ ಹರಿಕೃಷ್ಣ ಸಂಗೀತ ನಿರ್ದೇಶಕ ಜಿ.ಕೆ. ವೆಂಕಟೇಶ್ ಅವರನ್ನು ಸ್ಮರಿಸಿಕೊಂಡರು. ಸುಂದರವಾಗಿ ಹಾಡಿದ್ದ ಮೂಲಗಾಯಕ ಪಿ.ಬಿ. ಶ್ರೀನಿವಾಸ್ ಅವರನ್ನು ನೆನಪಿಸಿಕೊಳ್ಳದೇ ಹೋದದ್ದು ಬೇಸರವನ್ನುಂಟುಮಾಡಿತು. ಹೊಸ ಹಾಡುಗಳ ಭರಾಟೆಗಳ ಮಧ್ಯೆ ಅಂದಿನ ಹಳೆಯ ಗಾಯಕರು ಕಳೆದುಹೋಗುತ್ತಿದ್ದಾರೆಯೇ? ಎನ್ನುವ ಸಂಶಯ ಕಾಡುವಂತೆ ಮಾಡಿತ್ತು ಈ ಕಾರ್ಯಕ್ರಮ. ಇನ್ನುಮುಂದಾದರೂ ಇಂತಹ ಹಳೆಯ ಗೀತೆಗಳು ಬಂದಾಗ ಸಂಗೀತ ನಿರ್ದೇಶಕರ ಜೊತೆ ಮೂಲಗಾಯಕರನ್ನು ಸ್ಮರಿಸಿಕೊಳ್ಳುವಂತಾದರೆ ಒಂದಷ್ಟು ಮಾಹಿತಿ ಕೊಟ್ಟಂತಾಗುತ್ತದೆ.

—ಕಾಶಿನಾಥ ಎಂ ನಾಲವಾರ

## ನಾಗಿಣಿ ಭಾಗ-2 ಏಕೆ?

ಮನುಷ್ಯ ಹಾವಿನ ರೂಪ ತಾಳುವುದು, ಹಾವು ಮನುಷ್ಯನ ರೂಪ ತಾಳುವುದು. ಸೇಡು– ನಾಗಮಣಿ– ಮಾಂತ್ರಿಕರ ನಡುವಿನ ತ್ರಿಕೋನ ಕಥನ ತುಂಬ ಹಳಸಲು ವಿಷಯ. ಈ ವಿಷಯಾಧರಿಸಿ ದೇಶದಲ್ಲಿ ಹಲವಾರು ಸಿನಿಮಾಗಳು ಬಂದಿವೆ. ಅದೇ ವಸ್ತುವನ್ನು ಇಟ್ಟುಕೊಂಡು ಝೀ ಕನ್ನಡದಲ್ಲಿ 'ನಾಗಿಣಿ' ಪ್ರಸಾರವಾಗುತ್ತಿತ್ತು. ಇನ್ನೇನು ಅದು ಮುಗಿಯುತ್ತದೆ ಎಂದು ಖುಷಿಪಡುವಾಗ ಅದರ ಎರಡನೇ ಭಾಗ ಆರಂಭವಾಗಿದೆ.

ಹಾವಿನ ದ್ವೇಷ ಹನ್ನೆರಡು ವರ್ಷ. ಹಾವಿನ ಹೆಡೆಯ ಮೇಲೆ ನಾಗಮಣಿ ಇರುತ್ತದೆ ಎಂಬುದು ಕಪೋಲಕಲ್ಪಿತ. ನಾಗಮಣಿ ಇದ್ದರೆ ಅಪಾರ ಸಂಪತ್ತು ಪಡೆಯಬಹುದು ಎನ್ನುವ ನಂಬಿಕೆ ಈಗಲೂ ಇದೆ. ಅದನ್ನು ಪಡೆಯುವ ಪ್ರಯತ್ನದಲ್ಲಿ ಅನೇಕರು ಮೋಸ ಹೋಗಿದ್ದಾರೆ. ಮೂಢನಂಬಿಕೆಗಳನ್ನು ಹೆಚ್ಚಿಸುವ ಇಂತಹ ಕಥೆ ಮಾಡುವುದನ್ನು ಬಿಡಬೇಕು. ಬದಲಾಗಿ ಪುರಾಣ ಕಥೆಯನ್ನು ನಿರೂಪಿಸಿ ಆ ಬಗ್ಗೆ ತಿಳಿವಳಿಕೆ ಮೂಡಿಸಬಹುದು.

—ಮುರಲೀಧರ ಕುಲಕರ್ಣಿ, ಬೀದರ್

## ಸರಿಗನ್ನಡಂ ಗೆಲ್ಗೆ

ಕಲರ್ಸ್ ಕನ್ನಡದ 'ಕನ್ನಡತಿ'ಯ ಈಚಿನ ಕಂತಿನಲ್ಲಿ ವನಜಾ ಎನ್ನುವ ಪದದ ಅರ್ಥವನ್ನು 'ವನ' ಎಂದರೆ ಕಾಡು, 'ಜಾ' ಎಂದರೆ ಜನನ ಕಾಡಿನಲ್ಲಿ ಹುಟ್ಟಿದವಳು ಎಂದು ಅರ್ಥ ನೀಡಿದರು. ಆದರೆ ಅದು ತಪ್ಪು 'ವನ' ಎಂದರೆ ನೀರು ಎನ್ನುವ ಅರ್ಥವೂ ಇದೆ. ಆ ದೃಷ್ಟಿಯಲ್ಲಿ ವನಜಮುಖಿ ಎಂದರೆ ನೀರಲ್ಲಿ ಹುಟ್ಟಿದ ತಾವರೆ ಮುಖದವಳು ಎಂದಾಗುತ್ತದೆ. ಒಂದು ಶಬ್ದಕ್ಕೆ ಅನೇಕ ಅರ್ಥಗಳಿರುತ್ತವೆ.

—ಎನ್.ಡಿ. ವೆಂಕಟಸುಬ್ಬು ಮೈಸೂರು

## ಪಾಳಿಯಲ್ಲಿ ಜೀವನ

ಝೀ ವಾಹಿನಿಯಲ್ಲಿ 'ಯಾರೇ ನಿ ಮೋಹಿನಿ' ಮೋಹಿನಿಯ ಹಿಡಿತಕ್ಕೂ ಸಿಗದೆ ನಾಗಲೋಟದಿಂದ ಓಡುತ್ತಿದೆ. ಅದರಲ್ಲಿ ನಾಯಕ ವಾರದಲ್ಲಿ ಮೂರು ದಿನ ಮಾಯ, ಮೂರು ದಿನ ಬೆಳ್ಳಿ ಜತೆ ಚಕ್ಕಂದ ಆಡುತ್ತಾ ಕಾಲ ಕಳೆಯುತ್ತಾನೆ. ಇದನ್ನು ನೋಡಿದರೆ ಇನ್ನೂ ಮೂರು ವರ್ಷ ಕಳೆದರೂ ಬಗೆಹರಿಯದು ಎನ್ನುವುದರಲ್ಲಿ ಎರಡು ಮಾತಿಲ್ಲ. ನೋಡಿ ನೋಡಿ ತಲೆ ಚಿಟ್ಟು ಹಿಡಿದುಹೋಗಿದೆ. ದಯವಿಟ್ಟು ಈ ಸಾರವಿಲ್ಲದ ಧಾರಾವಾಹಿ ಮುಗಿಸಿ ಬೆರೆಯದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕಳಕಳಿಯ ಮನವಿ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಚೀಲ ಎಲ್ಲಿ ಹೋಯ್ತು?

ಕಲರ್ಸ್ ಕನ್ನಡದ 'ಮಗಳು ಜಾನಕಿ'ಯಲ್ಲಿ ನಿರಂಜನ್ ಅವರಿಗೆ ಮೇಲಿಂದ ಮೇಲೆ ಕಷ್ಟ. ಆತನ ಗೋಳು ನೋಡಲಾಗದು ಈಗ ಹೊಸದೊಂದು ಕಷ್ಟ ಹಠಾತ್ತನೆ ಬಂದೊದಗಿದೆ.

ನಿರಂಜನ 5 ಲಕ್ಷ ರೂಪಾಯಿ ಚೆಕ್ಕನ್ನು ವಾಪಸ್ಸು ಕೊಟ್ಟು ಹೊರಡುವಾಗ ಲ್ಯಾಪ್‌ಟಾಪ್ ಚೀಲ ಹಾಗೂ ಒಂದು ಕೈಚೀಲ ಹಿಡಿದು ಮನೆಗೆ ಹೊರಡುತ್ತಾನೆ. ಮನೆಗೆ ಬಂದು ಸೇರಿದಾಗ ಲ್ಯಾಪ್‌ಟಾಪ್ ಹೆಗಲ ಚೀಲವನ್ನು ನಾಪತ್ತೆ ಮಾಡಿದ್ದಾರೆ ಸಂಚಿಕೆಯ ನಿರ್ದೇಶಕರು! ಪಾಪ ಎಲ್ಲಾದರೂ ಕಳೆದುಕೊಂಡರೆ? ಬೆಲೆಬಾಳುವ ಚೀಲ ಎಲ್ಲಿ ಹೋಯ್ತು?

—ಕೊ.ಸು.ನರಸಿಂಹ ಮೂರ್ತಿ, ಚಾಮರಾಜಪುರಂ

ಮಾರಿದ್ದು ಸಿಕ್ಕಿದೆ: 'ಮಗಳು' ಹಿಂದಿನ ಸಂಚಿಕೆಯಲ್ಲಿ ನಿರಂಜನನ ತಾಯಿ ದೇವಕಿ ಮತ್ತು ಸಂಜನಾ, ತಮ್ಮ ಆಭರಣಗಳನ್ನು ಮಾರಿ ನಿರಂಜನನ ಸಾಲವನ್ನು ತೀರಿಸಿದರು ಎಂದು ಪ್ರಸಾರವಾಗಿತ್ತು. ದೇವಕಿಯವರು ಪುನಃ ಅದೇ ಸರ, ಓಲೆ ಧರಿಸಿದ್ದರು. ಇಂಥ ತಪ್ಪು ಆಗದಂತೆ ಜಾಗೃತಿ ವಹಿಸಬೇಕು.

—ವನಿತಾ ರಾವ್, ಬೆಂಗಳೂರು

## ಕಥೆ ಹಿಗ್ಗದಿರಲಿ

ಝೀ ವಾಹಿನಿಯಲ್ಲಿ 'ಸುಬ್ಬಲಕ್ಷ್ಮಿ ಸಂಸಾರ' ಮತ್ತು 'ಯಾರೇ ನೀ ಮೋಹಿನಿ' ಧಾರಾವಾಹಿಗಳು ಬರುತ್ತಿವೆ. ಅವುಗಳಲ್ಲಿ ಯಾವುದೇ ಹುರುಳಿಲ್ಲ. ಕಥೆಯನ್ನು ರಬ್ಬರಿನಂತೆ ಹಿಗ್ಗಿಸುತ್ತಿದ್ದಾರೆ. ಇದರ ಅವಶ್ಯಕತೆ ಏನಿದೆ? 'ರಾಧಾ ಕಲ್ಯಾಣ'ದಲ್ಲಿ ಕಾಂತಮ್ಮನ ಕುತಂತ್ರದಿಂದ ರಾಧ ಎಲ್ಲರ ವಿರೋಧವನ್ನು ಎದುರಿಸಬೇಕಾಗಿದೆ. ಆಕೆಯ ಪತಿ ಕೃಷ್ಣ ಯಾವುದೇ ಕೆಲಸ ಕಾರ್ಯ ಇಲ್ಲದೆ ಜೋಕರ್ ಆಗಿದ್ದಾರೆ. ಇದೆಲ್ಲ ಸರಿ ಹೋಗುವುದು ಯಾವಾಗ?

—ಎಸ್. ವಿಜಯಕುಮಾರಿ ಬೆಂಗಳೂರು